VIJAYAKUMAR KANNUR Digitally signed by VIJAYAKUMAR KANNUR Date: 2024.07.24 12:45:55 +0530

## ಮಧ್ಯಂತರ ಅರ್ಜಿ ಸಂಖ್ಯೆ.2 ರ ಮೇಲಿನ ಆದೇಶ

ನಿಯೋಜಿತ ಪ್ರತಿವಾದಿ **8** ಮತ್ತು **9** ರವರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **1** ನಿಯಮ **10(2)** ಹಾಗೂ ಸಹಕಲಂ **151** ರಡಿಯಲ್ಲಿ ಈ ಮದ್ಯಂತರ ಅರ್ಜಿಯನ್ನು ಸಲ್ಲಿಸಿ ಈ ದಾವೆಯಲ್ಲಿ ತಮ್ಮನ್ನು ಪ್ರತಿವಾದಿ **8** ಮತ್ತು **9** ಎಂದು ಸೇರ್ಪಡೆಮಾಡುವ ಸಲುವಾಗಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವರು.

**2.** ಸದರಿ ಮಧ್ಯಂತರ ಅರ್ಜಿಗೆ ನಿಯೋಜಿತ ಪ್ರತಿವಾದಿ **8** ರವರು ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿರುವರು. ವಾದಿಯರು ಈ ನಿಯೋಜಿತ ಪ್ರತಿವಾದಿ **8** ಮತ್ತು **9** ರವರ ತಂದೆಯಾದ ವಿಜಯಕುಮಾರ ಉರ್ಫ ಕುಮಾರ ಈತನ ಸಹೋದರನ ಹೆಂಡತಿ ಮತ್ತು ಮಕ್ಕಳಾಗಿರುವರು. ದಾವಾ ಆಸ್ತಿಗಳು ನಿಯೋಜಿತ ಪ್ರತಿವಾದಿ **8** ಮತ್ತು **9** ರವರ ತಂದೆಯಾದ ಬಾಳಪ್ಪ ತಂದೆ ಶಿವಪ್ಪ ಸಿದ್ದಾಪೂರ ಈತನಿಂದ ಬಂದಿರುವಂತಹ ಹಿಂದೂ ಅವಿಭಕ್ತ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುವವು. ಈ ದಾವೆಯ ಪ್ರತಿವಾದಿಯರು ಈ ನಿಯೋಜಿತ ಪ್ರತಿವಾದಿ **8** ಮತ್ತು **9** ರವರ ಮೃತ ತಂದೆಯ ಸಹೋದರಿ ಮತ್ತು ಸಹೋದರರಾಗಿರುವರು. ಈ ದಾವಾಯಲ್ಲಿ ನಿಯೋಜಿತ ಪ್ರತಿವಾದಿ **8** ಮತ್ತು **9** ರವರು ಮೃತ ವಿಜಯಕುಮಾರನ ವಾರಸುದಾರರಾಗಿರುವುದರಿಂದ ಈ ದಾವಾಸ್ತಿಗಳಲ್ಲಿ ತಮಗೂ ಸಹ ಹಕ್ಕು ಹಿತಾಶಕ್ತಿ ಇದ್ದು, ಆದ್ದರಿಂದ ಈ ದಾವೆಗೆ ತಮ್ಮನ್ನು ಪ್ರತಿವಾದಿಯನ್ನಾಗಿ ಸೇರ್ಪಡೆಮಾಡದೆ ವಾದಿಯರು ಈ ದಾವೆಯನ್ನು ದಾಖಲೆಮಾಡಿದ್ದು, ಈ ದಾವೆಗೆ ನಿಯೋಜಿತ ಪ್ರತಿವಾದಿ **8** ಮತ್ತು **9** ರವರು ಅವಶ್ಯಕ ಪಕ್ಷಗಾರರಾಗಿದ್ದು, ಆದ್ದರಿಂದ ತಮ್ಮನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಬೇಕೆಂದು ವಿನಂತಿಸಿಕೊಂಡಿರುವರು.

**3.** ಸದರಿ ಮದ್ಯಂತರ ಅರ್ಜಿಗೆ ವಾದಿ ಪರ ವಕೀಲರು ತಮ್ಮ ತಕರಾರನ್ನು ಸಲ್ಲಿಸಿ ಈ ಮಧ್ಯಂತರ ಅರ್ಜಿಯು ಕಾನೂನಿಂದಾಗಲೀ ಸಂಗತಿಗಳಿಂದಾಗಲಿ ಊರ್ಜಿತವಾಗಿರುವುದಿಲ್ಲ. ಈ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ಹೇಳಿರುವ ಸಂಗತಿಗಳು ನಿಜವಿರುವುದಿಲ್ಲ ಹಾಗೂ ಯಾವುದೇ ಸಕಾರಣಗಳಿರುವುದಿಲ್ಲ. ನಿಯೋಜಿತ ಪ್ರತಿವಾದಿ **8** ಮತ್ತು **9** ರವರು ವಾದಿಯರ ಕುಟುಂಬಕ್ಕೆ ಯಾವುದೇ ರೀತಿಯಿಂದ ಸಂಬಂಧವಿರುವುದಿಲ್ಲ. ನಿಯೋಜಿತ ಪ್ರತಿವಾದಿ **8** ಮತ್ತು **9** ರವರು ಮೃತ ವಿಜಯಕುಮಾರನ ಮಕ್ಕಳಾಗಿರುವುದಿಲ್ಲ. ಮೃತ ವಿಜಯಕುಮಾರ ಅವಿವಾಹಿತನಾಗಿ ಮೃತ ಪಟ್ಟಿರುವನು. ನಿಯೋಜಿತ ಪ್ರತಿವಾದಿ **8** ಮತ್ತು **9** ರವರು ವಾದಿಯ ಮತ್ತು ಉಳಿದ ಪ್ರತಿವಾದಿಯರ ಕುಟುಂಬಕ್ಕೆ ಅಪರಿಚಿತರಾಗಿರುವರು. ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ನಿಯೋಜಿತ ಪ್ರತಿವಾದಿ **8** ಮತ್ತು **9** ರವರು ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವರು. ಈ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ಹೇಳಿರುವ ಸಂಗತಿಗಳೆಲ್ಲ ಸಂಪೂರ್ಣ ಸುಳ್ಳಿನಿಂದ ಕೂಡಿದ್ದು. ನಿಯೋಜಿತ ಪ್ರತಿವಾದಿ **8** ಮತ್ತು **9** ರವರು ಮೃತ ವಿಜಯಕುಮಾರನ ಕಾನೂನುಬದ್ದ ವಾರಸುದಾರರ ಎಂಬುವುದಕ್ಕೆ ಸಂಬಂಧಪಟ್ಟಂತೆ ಯಾವುದೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದ್ದರಿಂದ ಈ ಮಧ್ಯಂತರ ಅರ್ಜಿಯನ್ನು ಖರ್ಚುಸಹಿತ ವಜಾಗೊಳಿಸಬೇಕೆಂದು ವಿನಂತಿಸಿಕೊಂಡಿರುವರು.

**4.** ಉಭಯ ವಕೀಲರ ವಾದವನ್ನು ಆಲಿಸಲಾಯಿತು. ಪ್ರಕರಣದ ಕಡತವನ್ನು ಪರೀಶಿಲಿಸಲಾಯಿತು.

**5.** ವಾದಿಯರು ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ದಾವಾ ಆಸ್ತಿಗಳಲ್ಲಿ **1/5** ಪಾಲು ವಿಭಾಗ ಕೋರಿ ದಾವೆ ದಾಖಲುಮಾಡಿದ್ದು, ವಾದ ಪತ್ರದ ವಂಶಾವಳಿಯಲ್ಲಿ ತೋರಿಸಿರುವಂತೆ ಕುಟುಂಬದ ಮೂಲ ಪುರುಷ ಬಾಳಪ್ಪ ತಂದೆ ಶಿವಪ್ಪ ಸಿದ್ದಾಪೂರ ಇವರಿಗೆ **1** ನೇ ವಾದಿಯ ಗಂಡ ಮೃತ

ನಿಂಗರಾಜ, ಪ್ರತಿವಾದಿ **1** ರಿಂದ **4** ಹಾಗೂ ಮೃತ ವಿಜಯಕುಮಾರ ಮತ್ತು ಮೀನಾಕ್ಷಿ ಎಂಬ ಒಟ್ಟು **7** ಜನ ಮಕ್ಕಳಿರುವುದಾಗಿ ಎಂದು ವಾದಪತ್ರದಲ್ಲಿ ಕಾಣಿಸಿರುವರು. ಆದರೆ ವಿಜಯಕುಮಾರ ವಿವಾಹವಾಗದೆ ಮೃತ ಪಟ್ಟಿರುವುದಾಗಿ ಎಂದು ವಾದಿಯರು ವಾದಪತ್ರದಲ್ಲಿ ಹೇಳಿದ್ದು, ಆದರೆ ಈ ನಿಯೋಜಿತ ಪ್ರತಿವಾದಿ **8** ಮತ್ತು **9** ರವರು ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ತಾವು ಮೃತ ವಿಜಯಕುಮಾರನ ಕಾನೂನುಬದ್ದ ವಾರಸುದಾರರಾಗಿರುವುದಾಗಿ ಎಂದು ಹೇಳಿ ಈ ಮಧ್ಯಂತರ ಅರ್ಜಿಗೆ ಪೂರಕವಾಗಿ ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿರುವರು. ಅದೇ ರೀತಿ ಪ್ರತಿವಾದಿ **1** ರಿಂದ **7** ರವರು ತಮ್ಮ ಲಿಖಿತ ಪತ್ರವನ್ನು ಸಲ್ಲಿಸಿದ್ದು, ಆ ಲಿಖಿತ ಪತ್ರದಲ್ಲಿ ವಾದಿಯರು ವಾದ ಪತ್ರದಲ್ಲಿ ತೋರಿಸಿರುವ ವಂಶಾವಳಿ ಸಂಪೂರ್ಣ ಸುಳ್ಳಿನಿಂದ ಕೂಡಿರುವುದಾಗಿದೆ ಎಂದು ಹೇಳಿರುವರು. ಆದ್ದರಿಂದ ಈ ನಿಯೋಜಿತ ಪ್ರತಿವಾದಿ **8** ಮತ್ತು **9** ರವರು ಮೃತ ವಿಜಯಕುಮಾರನ ಕಾನೂನುಬದ್ದ ವಾರಸುದಾರರು ಅಥವಾ ಇಲ್ಲ ಎಂಬುವುದಕ್ಕೆ ಸಂಬಂಧಪಟ್ಟಂತೆ ಸಾಕ್ಷಿಗಳ ಅವಶ್ಯಕತೆ ಇರುವುದರಿಂದ ಈ ಹಂತದಲ್ಲಿ ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವಂತ ನಿಯೋಜಿತ ಪ್ರತಿವಾದಿ **8** ಮತ್ತು **9** ರವರು ಈ ದಾವೆಗೆ ಅವಶ್ಯಕ ಪಕ್ಷಗಾರರಿರುವುದರಿಂದ ನಿಯೋಜಿತ ಪ್ರತಿವಾದಿ **8** ಮತ್ತು **9** ರವರು ಮೃತ ವಿಜಯಕುಮಾರನ ವಾರಸುದಾರರು ಹೌದು ಅಲ್ಲವೆಂಬುವುದನ್ನು ರುಜುವಾತುಪಡಿಸುವ ಭಾರ ಅವರ ಮೇಲಿರುವುದರಿಂದ ಹಾಗೂ ಈ ದಾವೆಗೆ ಮೃತ ವಿಜಯಕುಮಾರನ ಕಾನೂನುಬದ್ದವಾರಸುದಾರರು ನಿಯೋಜಿತ ಪ್ರತಿವಾದಿ **8** ಮತ್ತು **9** ರವರು ಇರುವುದಾಗಿ ಎಂದು ಈ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವುದರಿಂದ ಇವರು ಈ ದಾವಗೆ ಅವಶ್ಯಕ ಪಕ್ಷಗಾರರಾಗಿರುವುದರಿಂದ ನ್ಯಾಯದ ಹಿತದೃಷ್ಟಿಯಿಂದ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ:

# ಆದೇಶ

ನಿಯೋಜಿತ ಪ್ರತಿವಾದಿ **8** ಮತ್ತು **9** ರವರು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ.**2** ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **1** ನಿಯಮ **10(2)** ಹಾಗೂ ಸಹಕಲಂ **151** ರಡಿಯಲ್ಲಿ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ವಾದಿಯರ ವಾದಪತ್ರದ ತಿದ್ದುಪಡಿಗಾಗಿ ಹಾಗೂ ತಿದ್ದುಪಡಿಯ ವಾದ ಪತ್ರಕ್ಕಾಗಿ ಮುಂದೆ ಕರೆಯುವ ತಾರೀಖುಃ

**27.07.2024**

VIJAYAKUMAR KANNUR
Digitally signed by VIJAYAKUMAR KANNUR
Date: 2024.07.24 12:46:01 +0530

(ವಿಜಯಕುಮಾರ.ಎಮ್.ಕನ್ನೂರು)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಮುಧೋಳ.